RNU AIR DHARWAD

# JANUARY 31, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ಸಣ್ಣ ಹಣಕಾಸು ಸಂಸ್ಥೆಗಳ, ಬಲವಂತದ ಸಾಲ ವಸೂಲಾತಿ ತಡೆಯಲು, ರಾಜ್ಯ ಸರ್ಕಾರದಿಂದ ಶೀಘ್ರ ಸುಗ್ರೀವಾಜ್ಞೆ.
- ಗಾಂಧೀಜಿ ಸಂದೇಶಗಳ ಪ್ರಚಾರಕ್ಕೆ, ರಾಜ್ಯಾದ್ಯಂತ, 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ', ವ 'ಸ್ಫೂರ್ತಿ ಕಾರ್ಯಕ್ರಮ.
- ವರಕವಿ ದ.ರಾ. ಬೇಂದ್ರೆ ಅವರ, 129ನೇ ಜನ್ಮ ದಿನ: ಧಾರವಾಡದಲ್ಲಿ 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ.
- ರಾಜ್ಯಾದ್ಯಂತ, ಫೆಬ್ರುವರಿ 13ರ ವರೆಗೆ, 'ಸ್ಪರ್ಷ' ಕುಷ್ಠ ರೋಗ ಜಾಗ್ರತಿ ಅಭಿಯಾನ.

<><><>

**ಈಗ ವಾರ್ತೆಗಳ ವಿವರ**

<><><>

ಸಣ್ಣ ಹಣಕಾಸು ಸಂಸ್ಥೆಗಳು, ಸಾಲ ಪಡೆದವರಿಂದ ಬಲವಂತದ ವಸೂಲಾತಿ ತಡೆಯಲು, ರಾಜ್ಯ ಸರ್ಕಾರ ಶೀಘ್ರ ಸುಗ್ರೀವಾಜ್ಞೆ ಹೊರಡಿಸಲು, ಮುಖ್ಯಮಂತ್ರಿ ನೇತೃತ್ವದ ಹಿರಿಯ ಸಚಿವರುಗಳ ಸಭೆ ನಿರ್ಧರಿಸಿದೆ. ಕಾನೂನು ಖಾತೆ ಸಚಿವ ಎಚ್.ಕೆ.ಪಾಟೀಲ ಸಭೆ ಬಳಿಕ, ಬೆಂಗಳೂರಿನಲ್ಲಿ ಸುದ್ದಿಗಾರರಿಗೆ ಈ ಮಾಹಿತಿ ನೀಡಿದರು. ಸುಗ್ರೀವಾಜ್ಞೆ ಅಂಶಗಳನ್ನು ಪರಾಮರ್ಶೆಗೆ ಒಳಪಡಿಸಲು, ಕಾನೂನು, ಗೃಹ, ಹಣಕಾಸು ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ತಂಡ ರಚಿಸಲಾಗಿದೆ ಎಂದರು.

<><><>

ಬಳಿಕ, ಸಚಿವ ಸಂಪುಟ ಸಭೆಯ ವಿವರ ನೀಡಿದ ಅವರು, ಪೊಲೀಸ್ ಇಲಾಖೆಯಲ್ಲಿ, ಪೇದೆ ಹುದ್ದೆಯಿಂದ ಡಿ.ವೈ.ಎಸ್.ಪಿ. ಪದವಿ ವರೆಗೆ, ಪ್ರಶಂಸನೀಯ ಕ್ರೀಡಾಪಟುಗಳ ನೇರ ನೇಮಕಾತಿಗೆ, ಮೀಸಲಾತಿಯನ್ನು ಶೇಕಡ 3ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದರು.

<><><>

ವಿಜಯಪುರ ಜಿಲ್ಲೆ, ಸಿಂಧಗಿ ತಾಲೂಕಿನ ಕಡಣಿ ಗ್ರಾಮದ ಬಳಿ, ಭೀಮಾ ನದಿಗೆ ಅಡ್ಡಲಾಗಿ, 44 ಕೋಟಿ 50 ಲಕ್ಷ ರೂಪಾಯಿ ವೆಚ್ಚದಲ್ಲಿ, ಸೇತುವೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ, ನೀಡಲಾಗಿದೆ..

<><><>

ಬೀದರ್ ನಗರಸಭೆ ವ್ಯಾಪ್ತಿಗೆ, 16 ಗ್ರಾಮಗಳನ್ನು ಹೊಸದಾಗಿ ಸೇರ್ಪಡೆಗೊಳಿಸಿ, ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸಲು ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ..

<><><>

ಬೆಳಗಾವಿ ಜಿಲ್ಲೆ, ಅಥಣಿ ಪುರಸಭೆ ವ್ಯಾಪ್ತಿಯ, ಜೋಡು ಕೆರೆಯನ್ನು, ಪ್ರವಾಸಿ ತಾಣವಾಗಿ ರೂಪಿಸಲು, 15 ಕೋಟಿ ರೂಪಾಯಿ ವೆಚ್ಚದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು, ಸಚಿವ ಎಚ್.ಕೆ. ಪಾಟೀಲ ಹೇಳಿದರು.

<><><>

ಮಹಾತ್ಮ ಗಾಂಧೀಜಿ ಅವರ ಸಂದೇಶಗಳನ್ನು ಪ್ರಚುರ ಪಡಿಸಲು, ರಾಜ್ಯಾದ್ಯಂತ ವ ’ಸ್ಫೂರ್ತಿ, ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ’ ಕಾರ್ಯಕ್ರಮವನ್ನು ಆಯೋಜಿಸಲು, ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ತಿಳಿಸಿದ್ದಾರೆ. ಬೆಂಗಳೂರಿನ ಕೆ.ಪಿ.ಸಿ.ಸಿ. ಕಚೇರಿಯಲ್ಲಿ ನಡೆದ, ಹುತಾತ್ಮರ ದಿನಾಚರಣೆಯಲ್ಲಿ ಭಾಗವಹಿಸಿ, ಬಳಿಕ ಸುದ್ದಿಗಾರರೊಂದಿಗೆ ಅವರು, ಮಾತನಾಡಿದರು. ಗಾಂಧಿ ಭಾರತ ಕಾರ್ಯಕ್ರಮ ಆಚರಣಾ ಸಮಿತಿ ನೀಡಿರುವ ವರದಿ ಅನು ಷ್ಠಾನದ ಬಗ್ಗೆ, ಮುಖ್ಯಮಂತ್ರಿಯವರು ತೀರ್ಮಾನಿಸಲಿದ್ದು, ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಮನವಿ ಮಾಡಲಾಗಿದೆ ಎಂದರು.

<><><>

ಮಹಾತ್ಮ ಗಾಂಧೀಜಿ 77ನೇ ಪುಣ್ಯ ತಿಥಿ ಹಿನ್ನೆಲೆ, ಸರ್ವೋದಯ ದಿನ ಹಾಗೂ ಹುತಾತ್ಮರ ದಿನವನ್ನು, ನಾಡಿನಾದ್ಯಂತ ಆಚರಿಸಿ, ರಾಷ್ಟ್ರಪಿತನಿಗೆ ಗೌರವ ನಮನ ಸಲ್ಲಿಸಿದ ವರದಿಗಳು ಬಂದಿವೆ.

<><><>

ದೇಶದಲ್ಲಿ ಮಹಾತ್ಮ ಗಾಂಧೀಜಿ ಅವರ, ಚಿತಾ ಭಸ್ಮವಿರುವ ಕೆಲವೇ ಸ್ಥಳಗಳ ಪೈಕಿ, ಮಡಿಕೇರಿ ಕೂಡ ಒಂದಾಗಿದೆ. ಜಿಲ್ಲಾ ಖಜಾನೆಯಲ್ಲಿದ್ದ ಚಿತಾ ಭಸ್ಮವನ್ನು ಹೊರ ತೆಗೆದು, ಜಿಲ್ಲಾಧಿಕಾರಿ ವೆಂಕಟರಾಜಾ ನೇತೃತ್ವದಲ್ಲಿ, ಮೆರವಣಿಗೆಯಲ್ಲಿ ಕೊಂಡೊಯ್ದು, ಗಾಂಧಿ ಮಂಟಪದಲ್ಲಿ ಸರ್ವ ಧರ್ಮ ಪ್ರಾರ್ಥನೆ ನಡೆಯಿತು. ಈ ಸಂದರ್ಭದಲ್ಲಿ, ಪೊಲೀಸರು ಮೂರು ಸುತ್ತು ಗುಂಡು ಹಾರಿಸಿ, ಗೌರವ ವಂದನೆ ಸಲ್ಲಿಸಿದರು.

<><><>

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಪುಣ್ಯತಿಥಿ ಅಂಗವಾಗಿ, ಬರುವ ಫೆಬ್ರುವರಿ 13ರ ವರೆಗೆ, ‘ಸ್ಪರ್ಶ’ ಕುಷ್ಠ ರೋಗ ಜಾಗ್ರತಿ ಮತ್ತು ನಿರ್ಮೂಲನೆ ಅಭಿಯಾನಕ್ಕೆ, ಆರೋಗ್ಯ ಇಲಾಖೆ, ರಾಜ್ಯಾದ್ಯಂತ ಚಾಲನೆ ನೀಡಿದೆ.

<><><>

ಹಾವೇರಿ ಜಿಲ್ಲೆಯಾದ್ಯಂತ, 272 ತಂಡಗಳ ಮೂಲಕ, ಕುಷ್ಠ ರೋಗದ ಸಮೀಕ್ಷೆ ನಡೆಸಲಾಗಿದ್ದು, 76 ಜನ ಕು ಷ್ಠ ರೋಗಿಗಳು ಪತ್ತೆಯಾಗಿದ್ದಾರೆ. ಸವಣೂರು ಭಾಗದಲ್ಲಿ ಹೆಚ್ಚು ಪ್ರಕರಣಗಳಿದ್ದು, ಹಾವನೂರ ಹಾಗೂ ಗುತ್ತಲ ಪ್ರದೇಶದಲ್ಲೂ

ರೋಗಿಗಳಿರುವುದು ಕಂಡುಬಂದಿದೆ ಎಂದು, ಜಿಲ್ಲಾ ಕು ್ಠ ರೋಗ ನಿರ್ಮೂಲನಾಧಿಕಾರಿ ಡಾಕ್ಟರ್ ಚನ್ನಬಸಯ್ಯ ವಿರಕ್ತಮಠ, ಆಕಾಶವಾಣಿಗೆ ತಿಳಿಸಿದ್ದಾರೆ.

<><><>

ಶಿವಮೊಗ್ಗ ಜಿಲ್ಲೆಯಲ್ಲಿ 53 ಕು ್ಠ ರೋಗ ಪ್ರಕರಣಗಳು ಪತ್ತೆಯಾಗಿವೆ. ಆ ಪೈಕಿ ಶಿಕಾರಿಪುರ ತಾಲೂಕಿನಲ್ಲಿ, ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು, ಕುಷ್ಠ ರೋಗ ನಿರ್ಮೂಲನಾಧಿಕಾರಿ ಡಾಕ್ಟರ್ ಕೆ.ಎಸ್. ನಟರಾಜ್ ತಿಳಿಸಿದ್ದಾರೆ. ಕುಷ್ಠ ರೋಗ ಜಾಗೃತಿ ಆಂದೋಲನ ನಿಮಿತ್ತ, ಸೈಕಲ್ ಮತ್ತು ನಡಿಗೆ ಜಾಥಾಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ಕು ್ಠ ರೋಗ ಅಂಟು ರೋಗವಲ್ಲ; ತಾರತಮ್ಯ ಬೇಡ, ಮುನ್ನೆಚ್ಚರಿಕೆ ಇರಲಿ ಎಂದರು.

<><><>

ಕಳೆದ ಒಂದು ದಶಕದಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ, ಒಟ್ಟು 969 ಕು ್ಠ ರೋಗ ಪ್ರಕರಣಗಳು ವರದಿಯಾಗಿವೆ. ಪ್ರಸ್ತುತ 36 ಕು ್ಠ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಮಹೇಶ್ ಕುಮಾರ್ ತಿಳಿಸಿದ್ದಾರೆ.

<><><>

ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನೆ ಅಡಿ, ಸಬ್ಸಿಡಿ ಪಡೆದು ಸೌರ ವಿದ್ಯುತ್ ಅಳವಡಿಸಿಕೊಂಡಿರುವ, ಧಾರವಾಡದ ದೇಸಾಯಿ ಓಣಿ ನಿವಾಸಿ, ಫಲಾನುಭವಿ ಅಮಿತ್ ನಾಝರೆ, ಹೆಸ್ಕಾಂ ನಿಂದ ಶೂನ್ಯ ಮೊತ್ತದ ವಿದ್ಯುತ್ ಬಿಲ್ ಪಡೆಯುತ್ತಿದ್ದಾರೆ. ಮಾಲಿನ್ಯ ರಹಿತ, ಹಸಿರು ಇಂಧನ ಬಳಸುತ್ತಿರುವ ಹೆಮ್ಮೆ ಅವರದ್ದು. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಅಮಿತ ನಾಝರೆ ಧ್ವನಿ 40 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ **@airnews_dharwad** ಹಾಗೂ
ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ವರಕವಿ ದ.ರಾ. ಬೇಂದ್ರೆ ಅವರ, 129ನೇ ಜನ್ಮ ದಿನವಾದ, ಇಂದು ಸಂಜೆ 5 ಗಂಟೆಗೆ, ಧಾರವಾಡದ ಸಾಧನಕೇರಿಯ ಬೇಂದ್ರೆ ಭವನದಲ್ಲಿ, ಡಾಕ್ಟರ್ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ, 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಸಮಾರಂಭ ಆಯೋಜಿತವಾಗಿದೆ.

<><><>

ನವ್ಯ ಸಾಹಿತ್ಯದ, ಸ್ತ್ರೀಸಂವೇದನೆಯ ಸೃಜನಶೀಲ ಲೇಖಕಿ, ಧಾರವಾಡದ ಡಾಕ್ಟರ್ ವೀಣಾ ಶಾಂತೇಶ್ವರ 2025ನೇ ಸಾಲಿನ ಪ್ರಶಸ್ತಿಗೆ ಭಾಜನರಾಗಿದ್ದು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ವೀಣಾ ಶಾಂತೇಶ್ವರ ಧ್ವನಿ 60 ಸೆಕೆಂದುಗಳು

<><><>

ಇನ್ನೋರ್ವ ಪ್ರಶಸ್ತಿ ಪುರಸ್ಕೃತರಾದ, ತುಮಕೂರು ಜಿಲ್ಲೆ, ಚಿಕ್ಕ ನಾಯಕನ ಹಳ್ಳಿ ತಾಲೂಕು, ಸಿಂಗಾಪುರ ಗ್ರಾಮದ, ಹಿರಿಯ ವಿಮರ್ಶಕ, ಪ್ರೊಫೆಸರ್ ಎಸ್.ಜಿ.ಸಿದ್ಧರಾಮಯ್ಯ ತಮ್ಮ ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಧ್ವನಿ 60 ಸೆಕೆಂದುಗಳು

<><><>

ಹಿರಿಯ ಸಾಹಿತಿ ಸಿದ್ಧಲಿಂಗ ಪಟ್ಟಣಶೆಟ್ಟಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಬಸವರಾಜ ಡೋಣೂರ ಸಂಪಾದಿತ, ಬೇಂದ್ರೆಯವರ ನಾಟಕಗಳ ವಿಮರ್ಶಾ ಲೇಖನಗಳ ಸಂಗ್ರಹ, 'ನಾಟ್ಯರಂಗ' ಬಿಡುಗಡೆಯಾಗಲಿದೆ. ಗಾಯಕಿ ಶಕ್ತಿ ಪಾಟೀಲ ಅವರು, ದ.ರಾ.ಬೇಂದ್ರೆ ಅವರ ಗೀತೆಗಳನ್ನು ಪ್ರಸ್ತುತ ಪಡಿಸಲಿದ್ದಾರೆ.

<><><>

ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಆಯೋಜಿತ, ರಾಷ್ಟ್ರೀಯ ಕ್ರೀಡಾಕೂಟದ, ಪುರು 'ರ ರಸ್ತೆ ಸೈಕ್ಲಿಂಗ್ ಸ್ಪರ್ಧೆಯಲ್ಲಿ, ರಾಜ್ಯದ ನವೀನ್ ಥಾಮಸ್ ಜಾನ್, ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ. ಮಹಿಳೆಯರ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ, ವಿಜಯಪುರದ ಮೇಘಾ ಗೂಗಾಡ ಕಂಚಿನ ಪದಕ ಗೆದ್ದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ನಿರ್ಮಿಸಲಾದ, ನೂತನ ಮೇಲ್ಸೆತುವೆಯನ್ನು, ಮುಖ್ಯಮಂತ್ರಿ ಇಂದು ಮಧ್ಯಾಹ್ನ 3 ಗಂಟೆಗೆ, ಉದ್ಘಾಟಿಸಲಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಹುಕ್ಕೇರಿ ತಾಲೂಕು ಹಿಡಕಲ್ ಜಲಾಶಯದ ನೀರನ್ನು, ಧಾರವಾಡಕ್ಕೆ ಹರಿಬಿಡುವ, ರಾಜ್ಯ ಸರ್ಕಾರದ ನಿರ್ಧಾರಕ್ಕೆ, ಬೆಳಗಾವಿ ಮಠಾಧೀಶರು, ವಿರೋಧ ವ್ಯಕ್ತ ಪಡಿಸಿದ್ದಾರೆ.

<><><>

ಕೋಲಾರ ಜಿಲ್ಲೆಯ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಬಾಕಿ ಇದ್ದ, 2 ಸಾವಿರ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಎಂದು, ಉಪ ವಿಭಾಗಾಧಿಕಾರಿ ಮೈತ್ರಿ ತಿಳಿಸಿದ್ದಾರೆ.

<><><>

ಧಾರವಾಡ ಜಿಲ್ಲೆಯಲ್ಲಿ 720 ಲೇವಾದೇವಿದಾರರು, 104 ಗಿರವಿದಾರರು ಮತ್ತು 281 ಫೈನಾನ್ಸ್ ಕಾರ್ಪೋರೇ 'ನ್ ಗಳು ಸೇರಿ, ಒಟ್ಟು ಸಾವಿರದ 105 ಮೈಕ್ರೊ ಫೈನಾನ್ಸ್‌ಗಳಿವೆ ಎಂದು ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಚಿತ್ರದುರ್ಗ ಜಿಲ್ಲೆಯಲ್ಲಿ, ಬಾಲ್ಯ ವಿವಾಹ, ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟಲು, ಸಾಂಘಿಕ ಪ್ರಯತ್ನ ಕೈಗೊಳ್ಳುವುದಾಗಿ, ಜಿಲ್ಲಾ ಪ್ರಧಾನ ನ್ಯಾಯಾಧೀಶ ರೋಣ ವಾಸುದೇವ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸಣ್ಣ ಹಣಕಾಸು ಸಂಸ್ಥೆಗಳ, ಬಲವಂತದ ಸಾಲ ವಸೂಲಾತಿ ತಡೆಯಲು, ರಾಜ್ಯ ಸರ್ಕಾರದಿಂದ ಶೀಘ್ರ ಸುಗ್ರೀವಾಜ್ಞೆ.
- ಗಾಂಧೀಜಿ ಸಂದೇಶಗಳ ಪ್ರಚಾರಕ್ಕೆ, ರಾಜ್ಯಾದ್ಯಂತ, ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ’, ವ ’ಸ್ಫೂರ್ತಿ ಕಾರ್ಯಕ್ರಮ.
- ವರಕವಿ ದ.ರಾ. ಬೇಂದ್ರೆ ಅವರ, 129ನೇ ಜನ್ಮ ದಿನ; ಧಾರವಾಡದಲ್ಲಿ ‘ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ.
- ರಾಜ್ಯಾದ್ಯಂತ, ಫೆಬ್ರುವರಿ 13ರ ವರೆಗೆ, ‘ಸ್ಪರ್ಶ’ ಕುಷ್ಠ ರೋಗ ಜಾಗ್ರತಿ ಅಭಿಯಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>